ಅವರನ್ನು ಖಾಯಂಗೊಳಿಸಬೇಕೆಂದು ಹೇಳಿ ಆದೇಶವನ್ನು ಮಾಡಿದ್ದಾರೆ ಎರಡು ವರ್ಷ ಆಗಿದೆ. ಅವರಿಗೆ ಮಧ್ಯಂತರ 900 ರೂಪಾಯಿ ಹಣ ಪಾವತಿ ಮಾಡುವ ಬಗ್ಗೆ ಆದೇಶ ಮಾಡಲಾಗಿದೆ. ನನ್ನ ಮನವಿ ಏನೆಂದರೆ ಇವತ್ತು ಬೇರೆ ಬೇರೆ ಇಲಾಖೆಗಳಲ್ಲಿ ಐದು ವರ್ಷ, ಹತ್ತು ವರ್ಷ ಕೆಲಸ ಮಾಡಿದವರಿಗೆ ಖಾಯಂ ಮಾಡಲಾಗಿದೆ. ಆ ಗ್ರಾಮ ಸಹಾಯಕರನ್ನು ಕೂಡ ತಾವು ಅತಿ ಶೀಘ್ರದಲ್ಲಿಯೇ ಖಾಯಂಗೊಳಿಸಬೇಕೆಂದು ತಮ್ಮ ಮೂಲಕ ಮಾನ್ಯ ಕಂದಾಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಈ ವಿಚಾರ ಸುಮಾರು ಎರಡು ವರ್ಷಗಳಿಂದಲೂ ಬಹಳ ತೀವ್ರವಾಗಿ ಚರ್ಚೆಯಲ್ಲಿದೆ. ಸುಮಾರು ಎಂಟು ಸಾವಿರಕ್ಕೂ ಹೆಚ್ಚು ಗ್ರಾಮ ಸಹಾಯಕರು 20 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಇವರ ಬಗ್ಗೆ ಸರ್ಕಾರಕ್ಕೆ ಸಹಾನುಭೂತಿ ಇದೆ. ಇವರನ್ನು ಖಾಯಂ ಮಾಡತಕ್ಕ ವಿಚಾರ ನಮ್ಮ ಸರ್ಕಾರದ ಸಚಿವರ ಸಂಪುಟದ ಉಪ ಸಮಿತಿ ಮುಂದೆ ಇದೆ. ನಿನ್ನೆ ತಾನೇ ಸಭೆ ಇತ್ತು. ಕಾರಣಾಂತರದಿಂದ ಸ್ವಲ್ಪ ಮುಂದೆ ಹೋಗಿದೆ. ಆದಷ್ಟು ಬೇಗ ಸಮಿತಿ ಸಭೆ ಕರೆದು ನಾವು ಬೇಗ ಸಹಾನುಭೂತಿಯಿಂದ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಅವರಿಗೆ ತಿಳಿಸಲು ಬಯಸುತ್ತೇನೆ.

ಊ) ಕಮಲಾಪುರ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ.

ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ): ಮಾನ್ಯ ಅಧ್ಯಕ್ಷರೆ, ಕಮಲಾಪುರ ಮೀಸಲು ಕ್ಷೇತ್ರದಲ್ಲಿ ಸಾಕಷ್ಟು ನೀರಿನ ತೊಂದರೆ ಇದೆ ಎಂದು ಮೊದಲಿನಿಂದ ಈ ಸದನದಲ್ಲಿ ವಿನಂತಿ ಮಾಡಿಕೊಂಡಿದ್ದೇನೆ. ಈಗಲೂ ಕೂಡ ಅದೇ ತರಹ ದಿನೇ ದಿನೇ ನೀರಿನ ತೊಂದರೆ ಹೆಚ್ಚಾಗುತ್ತಿದೆ, ಕಡಿಮೆ ಆಗುತ್ತಿಲ್ಲ. ಏಕೆಂದರೆ ನನ್ನ ಸ್ವಂತ ಊರಿನಲ್ಲಿ ನೀರಿನ ಹಾಹಾಕಾರ ಬಹಳ ಆಗಿದ್ದು, ಮೂರು ದಿನ ಸ್ಟ್ರೈಕ್ ಮಾಡಿ, ಪಂಚಾಯತಿ ಕಛೇರಿ ಮುಂದೆ ಕುಳಿತು ಪಂಚಾಯತಿ ಛೇರ್ಮನ್‌ಗೆ ಕೊಡದಿಂದ ಹೊಡೆದು ಸೆಕ್ರೆಟರಿಗಳಿಗೆ ತೊಂದರೆ ಕೊಟ್ಟರು. ಬೆಂಗಳೂರಿಗೆ ದೂರವಾಣಿ ಮಾಡಿದಾಗ ನಾನು ಎಕ್ಸಿಕ್ಯೂಟೀವ್ ಇಂಜಿನಿಯರ್ ಮತ್ತು ಸಂಬಂಧಪಟ್ಟವರಿಗೆ ಫೋನ್ ಮಾಡಿ ನನ್ನ ಸ್ವಂತ ಊರಿನಲ್ಲಿ ತೊಂದರೆ ಇದೆ. ಏನೇ ಮಾಡಿ, ಆದರೆ ಪರಿಹಾರ ಮಾಡಿ ಎಂದು ಹೇಳಿದಾಗ ಅವರು ಸ್ವತಃ ಊರಿಗೆ ಹೋಗಿ ವಿಸಿಟ್ ಕೊಟ್ಟಿದ್ದಾರೆ. ವಿಸಿಟ್ ಕೊಟ್ಟಾಗ ಅಲ್ಲಿ ವಿಶ್ವ ಬ್ಯಾಂಕ್ ನೆರವಿನ ಒಂದು ಬೋರ್ ಹಾಕಿದ್ದರು. 400 ಅಡಿ ಅಂತರದಲ್ಲಿ ಬೋರ್ ಇತ್ತು. ಅವರು ನೋಡಿಕೊಂಡು ಕೆಲಸ ಮಾಡಿದ್ದಾರೆ. ಆ ಕೆಲಸ ಮಾಡಿ ಮೋಟರನ್ನು ಕೂಡ ಕೂರಿಸಿದ್ದಾರೆ. ಆದರೆ 400 ಅಡಿ ಪೈಪ್ ಕೊಡಬೇಕಾದರೆ ಡಿಸಿ ಅವರು ಏನೋ ರೊಕ್ಕ ಕೇಳಿದ್ದಾರಂತೆ. ಆ ಗ್ರಾಮ ಪಂಚಾಯತಿ ಅಧ್ಯಕ್ಷರು, ಸೆಕ್ರೆಟರಿ ಮತ್ತು ಚಪರಾಸಿಗಳು ಬಂದರು. ಇಂಜಿನಿಯರ್‌ಗಳು ನನ್ನ ಒತ್ತಾಯದ ಮೇರೆಗೆ ಪೈಪ್‌ಗಳನ್ನು ಕೊಟ್ಟಿದ್ದಾರೆ. ಕೊಟ್ಟ ಬಳಿಕ ಡಿಸಿಯವರಿಗೆ ತಿಳಿಸಿದ್ದಾರೆ. ಹೀಗೆ ತೊಂದರೆ

ಆಗಿದೆ ದುಡ್ಡು ಕೊಡಬೇಕಾಗಿದೆ ಎಂದು ಕೇಳಿದ್ದಕ್ಕೆ ಡಿಸಿಯವರು ಎಷ್ಟು ಹಣ ಆಗಿದೆ ಎಂದು ಕೇಳಿದಾಗ ಇವರು 12 ಸಾವಿರ ರೂಪಾಯಿ ಆಯಿತು ಎಂದು ಹೇಳಿದ್ದಾರೆ. ಆ ಡಿಸಿಯವರು ಏನು ಹೇಳಿದ್ದಾರೋ, ಬಿಟ್ಟಿದ್ದಾರೋ, ಆ ಲೋಡ್ ಮಾಡಿದ ಪೈಪ್ ವಾಪಸ್ ಇಳಿಸಿಕೊಂಡಿದ್ದಾರೆ. ನಾನು ಒಂದು ಸಮಾರಂಭಕ್ಕೆ ಹೋಗಿದ್ದೆ. ನಾನು ರೈಲ್ವೆ ನಿಲ್ದಾಣಕ್ಕೆ ಬಂದಾಗ ಚಪರಾಸಿಯವರು ಬಂದು ವಿಜ್ಞಾಪನೆ ಮಾಡಿದರು. ನಾವು ಬೆಳಿಗ್ಗೆಯಿಂದ ಬಿಸಿಲಲ್ಲಿ ಕುಳಿತಿದ್ದೇವೆ, ಲೋಡ್ ಮಾಡಿದಂತಹ ಪೈಪನ್ನು ಇಳಿಸಿಕೊಂಡರು, ಅಲ್ಲಿ ಆಫೀಸ್‌ನಲ್ಲಿ ಏನು ಗದ್ದಲ ಇದೆಯೋ ಗೊತ್ತಿಲ್ಲ ಎಂದರು. ಆಗ ನಾನು ಡಿಸಿಯವರ ಹತ್ತಿರ ಮಾತನಾಡಿದಾಗ ಅವರು ಹೇಳಿದರು, ನನಗೆ ಏನೂ ಹಾಗೆ ತಿಳಿಸಿಲ್ಲ, ನಾನು ಹಣ ಕೊಡುತ್ತೇನೆಂದು ಹೇಳಿದೆ ಎಂದು ಅವರು ಹೇಳುತ್ತಾರೆ. ನನಗೆ ಏನು ಅನುಮಾನ ಬರುತ್ತಿದೆ ಎಂದರೆ ಬಹಳಷ್ಟು ಹಳ್ಳಿಯಲ್ಲಿ ಸಮಸ್ಯೆ ಇದೆ. ಮಂಡಗಿ ಗ್ರಾಮಕ್ಕೆ ಬೋರ್ ಹಾಕಿದ್ದಾರೆ, ನೀರು ಬಿದ್ದು ಒಂದು ತಿಂಗಳಾಯಿತು. ಆದರೆ ಪೈಪನ್ನು ಅಳವಡಿಸುತ್ತಿಲ್ಲ. ಮಂಡಕಿ ಗ್ರಾಮಕ್ಕೆ ಬೋರ್ ಹಾಕಿದ್ದಾರೆ ನೀರು ನಾಲ್ಕು ಇಂಚು ಬಿದ್ದಿದೆ. ಆದರೆ ಪೈಪ್ ಜೋಡಿಸುತ್ತಿಲ್ಲ. ಇಂಜಿನಿಯರ್ ಏನು ಹೇಳುತ್ತಿದ್ದಾರೆ ಎಂದರೆ ನಮಗೆ ದುಡ್ಡು ಇಲ್ಲ ಹೇಗೆ ಮಾಡುವುದು ಎಂದು ಹೇಳುತ್ತಾರೆ.

ಅಧ್ಯಕ್ಷರು: ಹ್ಯಾಂಡ್ ಪಂಪ್ಸ್ ಜೋಡಿಸಬೇಕೆಂದು ತಾನೇ ತಾವು ಹೇಳುತ್ತಿರುವುದು. ಕುಡಿಯುವ ನೀರಿನ ಅಭಾವ ಜಾಸ್ತಿ ಇದೆ, ಈ ಗ್ರಾಮಗಳಲ್ಲೆಲ್ಲಾ ಬೋರ್‌ವೆಲ್ ಡ್ರಿಲ್ ಮಾಡಿದ್ದಾರೆ, ಹ್ಯಾಂಡ್ ಪಂಪ್ಸ್ ಜೋಡಿಸಬೇಕೆಂದು ತಮ್ಮ ಸಮಸ್ಯೆ ಅಲ್ಲವೇ? ಮಂತ್ರಿಗಳು ಇದ್ದಾರೆ, ಉತ್ತರ ಹೇಳುತ್ತಾರೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉಪಮುಖ್ಯಮಂತ್ರಿಗಳು, ನಾವೆಲ್ಲರೂ ಹೋಗಿ ಗುಲ್ಬರ್ಗಾ ವಿಭಾಗದಲ್ಲಿ ಚರ್ಚೆ ಮಾಡಿದ್ದೇವೆ. ಚರ್ಚೆ ಮಾಡಿದ ಮೇಲೆ ಈ ಸಂದರ್ಭಕ್ಕೆ ಎಲ್ಲಾ ಸಂಬಂಧಪಟ್ಟಂತಹ ಹಳ್ಳಿಗಳ ವಿಷಯಕ್ಕೆ ಆದೇಶನ್ನು ಕೊಟ್ಟಿದ್ದೇವೆ. ಅವರು 400 ಅಡಿಯ ಪೈಪನ್ನು ಕೆಲವು ಗ್ರಾಮಗಳಿಗೆ ಹಾಕಬೇಕೆಂದು ಹೇಳಿದ್ದಾರೆ. ಅವರು ಹೇಳಿದಂತಹ ಎಲ್ಲಾ ಗ್ರಾಮಗಳಿಗೂ ಕೂಡ ಕೊಳವೆ ಬಾವಿಗಳನ್ನು ತೆಗೆಸಲಾಗಿದೆ. ಮತ್ತು ಅವರಿಗೆ ಬೇಕಾಗಿರತಕ್ಕಂಥ ಹಣದ ಕೊರತೆ ಇಲ್ಲ. ಅದನ್ನು ಕೂಡಲೇ ಮಾಡಿಕೊಡಿ ಎಂದೂ ಸಹ ಹೇಳಿದ್ದೇವೆ. ತಾವು ಅಲ್ಲಿ ಈ ವಿಚಾರವನ್ನು ಚರ್ಚೆ ಮಾಡಿ ಮಾಡಿಕೊಡಬೇಕು. ಹಣ ಇಲ್ಲ ಎಂದು ಹೇಳಿದರೆ ಇವತ್ತೇ ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ರೇವುನಾಯಕ್ ಬೆಳಮಗಿ: ನಾನು ನಿಜವಾಗಿ ಹೇಳುತ್ತೇನೆ. ಅವರು ಹಣ ಇಲ್ಲ ಎಂದು ಬಾಯಲ್ಲಿ ಹೇಳುವುದಿಲ್ಲ, ಆದರೆ ದುಡ್ಡು ಕೊಡುತ್ತಿಲ್ಲ.

ಅಧ್ಯಕ್ಷರು: ಮಾನ್ಯ ರೇವು ನಾಯಕರೇ, ತಾವು ನಂತರ ನನ್ನ ಕಛೇರಿಗೆ ಬನ್ನಿ ನಾನೇ

ಮಂತ್ರಿಗಳ ಹತ್ತಿರ ಮಾತನಾಡಿ ನಿಮ್ಮ ಕೆಲಸ ಮಾಡಿಸಿಕೊಡುತ್ತೇನೆ.

ಋ) ವಿಟ್ಲ ಕ್ಷೇತ್ರದ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ.

ಶ್ರೀ ಎ.ರುಕ್ಮಯ್ಯ ಪೂಜಾರಿ (ವಿಟ್ಲ): ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರಕ್ಕೆ ಸೇರಿದ ಕಲ್ಲಡಕ ಒಂದು ಬದಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಮತ್ತೊಂದು ಬದಿಯಲ್ಲಿ ರಾಜ್ಯ ಹೆದ್ದಾರಿ ಹಾದು ಹೋಗುವಂತಹ ಪ್ರದೇಶ ಇದೆ. ಎರಡೂ ಇಲಾಖೆಗೆ ಸೇರಿದಂತಹ ಜಮೀನು ಇದೆ. ಅಲ್ಲಿ ಕೆಲವು ವರ್ಷಗಳಿಂದ ಅನಧಿಕೃತ ಶೆಡ್‌ಗಳು ತಲೆ ಎತ್ತಿ ಅಲ್ಲಿ ವ್ಯಾಪಾರ ಪ್ರಾರಂಭ ಆಗಿದೆ. ಅದರಲ್ಲಿ ಕೆಲವು ಹೋಟೆಲ್‌ಗಳೂ ತಲೆ ಎತ್ತಿವೆ. ಮೂರ್ನಾಲ್ಕು ಹೋಟೆಲ್‌ಗಳು ಇವೆ. ಇಲ್ಲಿ ಹೋಟೆಲ್‌ನಿಂದಾಗಿ ಕೊಳಕು ನೀರೆಲ್ಲಾ ಶೇಖರಣೆ ಆಗಿ ಅಲ್ಲಿ ದುರ್ನಾತ ಬೀರಿ ಆಸುಪಾಸಿನಲ್ಲಿ ಓಡಾಡಲು ಆಗುವುದಿಲ್ಲ. ಜನತುಂಬಾ ರೋಸಿ ಹೋಗಿದ್ದಾರೆ. ಅಲ್ಲಿ ಹತ್ತಿರದಲ್ಲಿಯೇ ಮಸೀದಿ ಇದೆ, ಶಾಲೆ ಇದೆ. ಜನಸಂಚಾರಕ್ಕೆ ಹಾಗೂ ಮಕ್ಕಳಿಗೆ ಹೋಗಲು ಕಷ್ಟ ಆಗುತ್ತಿದೆ. ಪಂಚಾಯತಿಯವರು ಸಹ ಅಲ್ಲಿ ನಿರ್ಣಯ ಮಾಡಿದ್ದಾರೆ. ತಾಲ್ಲೂಕು ಪಂಚಾಯತಿಯವರು ಹೋಟೆಲ್ ತೆಗೆಸಬೇಕೆಂದು ನಿರ್ಣಯ ಮಾಡಿದ್ದಾರೆ. ಇಷ್ಟೆಲ್ಲಾ ಆದರೂ ಸಹ ಇವತ್ತಿನವರೆಗೆ ಅದನ್ನು ತೆಗೆದಿಲ್ಲ. ಅದನ್ನು ಆದಷ್ಟು ಬೇಗ ತೆಗೆಸುವಂತಹ ಕ್ರಮ ಕೈಗೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇಲ್ಲಿ ಅನಧಿಕೃತವಾಗಿ ಶೆಡ್‌ಗಳನ್ನು ನಿರ್ಮಾಣ ಮಾಡಿದ್ದಾರೆಂದು ಹೇಳಿದ್ದಾರೆ. ಸರ್ಕಾರಿ ಭೂಮಿಯಲ್ಲಿ ಇದ್ದರೆ ಅದನ್ನು ತೆಗೆಸುವಂತಹ ಕಾರ್ಯಕ್ರಮ ಶೀಘ್ರದಲ್ಲಿಯೇ ಕೈಗೊಳ್ಳಲಾಗುವುದು.

ಎ) ಮೈಸೂರಿನ ಗಂಗೋತ್ರಿ ಬಡಾವಣೆಯ ಕುದುರೆ ಮಾಳದಲ್ಲಿ ಭಾರಿ ಮಳೆಯಿಂದಾಗಿರುವ ನಷ್ಟದ ಬಗ್ಗೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ): ಗೌರವಾನ್ವಿತ ಸಭಾಧ್ಯಕ್ಷರೆ ನಿಮ್ಮ ಬಾಯಿಂದ ಬಂದ ನುಡಿಮುತ್ತುಗಳು ಹೇಗಿದೆ ಎಂದರೆ ಬಸವಣ್ಣನವರು ಹೇಳುತ್ತಿದ್ದರಲ್ಲಾ ''ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಮಾಣಿಕ್ಯದ ಸ್ಪಟಿಕದಂತಿರಬೇಕು, ನುಡಿದರೆ ಲಿಂಗ ಮೆಚ್ಚಿ ಹೌದು, ಹೌದು ಎನ್ನಬೇಕು ನುಡಿಯೊಳಗೆ ನಡೆಯದಿದ್ದರೆ ನಮ್ಮ ಕೂಡಲ ಸಂಗಮ ಮೆಚ್ಚನಯ್ಯ'' ಎಂಬಂತೆ ಅರ್ಥ ಗರ್ಭಿತ ಆಗಿತ್ತು. ನೀವು ಹೇಳಿದ ವ್ಯಾಖ್ಯಾನ ನಮ್ಮ ಮನಸ್ಸನ್ನು ಪ್ರಫುಲ್ಲಗೊಳಿಸಿತು. ಅದರಿಂದ ಇದನ್ನು ಹೇಳುತ್ತಿದ್ದೇನೆ. ಕಳೆದ ಒಂದು ತಿಂಗಳ ಹಿಂದೆ ನಮ್ಮ ಮಾನ್ಯ ಉಪ ಮುಖ್ಯಮಂತ್ರಿಯವರು ಸ್ವಯಂ ಸೇವಾ ಸಂಸ್ಥೆಗಳಿಗೆ 18 ಲಕ್ಷ ರೂಪಾಯಿಗಳ ಅನುದಾನವನ್ನು, ಸಮಾಜ ಕಲ್ಯಾಣ ಇಲಾಖೆಯಿಂದ ಐದು ಲಕ್ಷ ಪಡೆದು 120 ಮನೆಗಳನ್ನು ನಿರ್ಮಾಣ ಮಾಡಿದ್ದರು. ಗಂಗೋತ್ರಿ ಬಡಾವಣೆಯ ಕುದುರೆ ಮಾಳದಲ್ಲಿ